



ಕುದುರೆಮುಖ ಕಾಡಿನ ಬಗ್ಗೆ ಅನನ್ಯ ಪ್ರೀತಿ ಮತ್ತು ಮಾಹಿತಿ ಹೊಂದಿರುವ ಗೆಳೆಯ ಪ್ರೇಮ್‌ನಿಂದ ಬಂತು.

ಜಲಪಾತದ ಚಿತ್ರ ತೆಗೆಯಲು ಮುಂದಾದಾಗ ಅಲ್ಲಿದ್ದ ಮಂಗಗಳು ಆಹಾರಕ್ಕಾಗಿ ಬೇಡಿಕೆ ಸಲ್ಲಿಸಿ ಅಡ್ಡಿ ಮಾಡಿದವು. ನಮ್ಮಲ್ಲಿದ್ದ ಬಾಳೆಹಣ್ಣು ನೀಡಿದ ಮೇಲೆ ಅವು ಸುಮ್ಮನಾದವು.

ಕುದುರೆಮುಖ ಉದ್ಯಾನದ ಒಳಗೆ ಹಾದಿ ಸವೆಯುತ್ತಲೇ ಮಳೆಯ ಪ್ರಮಾಣ ಮತ್ತಷ್ಟು ಹೆಚ್ಚುತ್ತಿತ್ತು. ಭದ್ರಾ, ತುಂಗಾ ಮತ್ತು ನೇತ್ರಾವತಿ ನದಿಗಳು ಹುಟ್ಟುವ 'ಗಂಗಾಮೂಲ'ದ ಬಳಿಯಂತೂ ಮಳೆ ಬಿಡುಬೀಸಾಗಿ ಸುರಿಯುತ್ತಲೇ ಇತ್ತು. ಜೀಪಿನ ವೈಪರ್ ಎಷ್ಟು ವೇಗವಾಗಿ ಸರಿದಾಡಿದರೂ ಮಳೆ ನೀರನ್ನು ಒರೆಸಿ ದಾರಿ ತೋರಿಸಲು ಅಸಾಧ್ಯವಾಗಿತ್ತು.

'ಈ ಜಾಗದಲ್ಲಿ ಮಳೆಗಾಲವಿಡೀ ಇದೇ ಥರ ಜಡಿಮಳೆ. ಇಲ್ಲಿ ಬಹುಶಃ ಆಗುಂಬೆಗಿಂತ ಜಾಸ್ತಿ ಮಳೆ ಸುರಿಯುತ್ತೆ. ಆದರೆ ಇಲ್ಲಿ ಮಳೆ ಅಳೆಯುವ ಸಾಧನವೇ ಇಲ್ಲ' ಎಂದು ಅನಿಲ ಹೇಳುತ್ತಿದ್ದ. ಕುದುರೆಮುಖದಲ್ಲಿ ಈಗಾಗಲೇ 200 ಇಂಚು ಮಳೆ ಸುರಿದಿದೆ. ಹಾಗಾದರೆ ಗಂಗಾಮೂಲದಲ್ಲಿ ಎಷ್ಟು ಸುರಿದಿರಬಹುದು ಎಂಬ ಲೆಕ್ಕಾಚಾರ ಹಾಕಿದೆವು.

ಅಲ್ಲಿಂದ ಮುಂದಕ್ಕೆ ಕರಡಿ ಮುಗಿಲಿನ ಹಾವಳಿ ಹೆಚ್ಚಾಯಿತು. ಕುದುರೆಮುಖ ಸಂಸ್ಥೆಯ ವಿದ್ಯುತ್ ತಂತಿ ಮಾರ್ಗವನ್ನು ತೆಗೆದ ಮೇಲೆ ಎರಡೇ ವರ್ಷದಲ್ಲಿ ಮಾರ್ಗದ ಕೆಳಗೆ ನಿಸರ್ಗ ತಾನೇ ಬೆಳೆಸಿದ ಕಾಡು ಮತ್ತು ನಮ್ಮ ಅರಣ್ಯ ಇಲಾಖೆ ಬೆಳೆಸುವ ಅಕೇಶಿಯಾ ಮರಗಳ ಪ್ಲಾಸ್ಟಿಕ್ ಕಾಡನ್ನು ಹೋಲಿಸಿ ನಕ್ಕುಬಿಟ್ಟೆವು.

ನಾಗತೀರ್ಥದ ಬಳಿ ಬರುತ್ತಲೇ ಎಡಭಾಗದಲ್ಲಿ ಸ್ವಲ್ಪ ವಿಶಾಲವಾಗಿದ್ದ ಹುಲ್ಲುಗಾವಲಿನಲ್ಲಿ ದೂರದಲ್ಲಿ ಮೇಯುತ್ತಿದ್ದ ನಾಲ್ಕು ಕಡವೆಗಳು ಕಂಡು ಬಂದವು. ಜಿಂಕೆಗಿಂತ ದೊಡ್ಡ ಗಾತ್ರದ ಕಡವೆಗಳು ಜೀಪಿನ ಸದ್ದು ಕೇಳುತ್ತಿದ್ದಂತೆಯೇ ನಾಗಾಲೋಟದಲ್ಲಿ ಓಡಿದವು.

ಈ ಬಲಿ ಪ್ರಾಣಿಯ ಆಧಾರದಲ್ಲೇ ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ಹುಲಿ ಯೋಜನೆಗೆ ಅಳವಡಿಸಲಾಗುತ್ತಿದೆ. ಆದರೆ ಅದಕ್ಕಾಗಿ ಉದ್ಯಾನ ವ್ಯಾಪ್ತಿಯ ಜನರು ತಮ್ಮ ಬದುಕು ಬಲಿಕೊಡಬೇಕಾಗಿರುವುದು ವಿಷಾದದ ಸಂಗತಿ.

ನಾಲ್ಕಾರು ಕಿ.ಮೀ. ಸಾಗಿದ ಮೇಲೆ ಬಲಭಾಗದಲ್ಲಿ ಸೂತನಬ್ಬಿ ಜಲಪಾತದ ಪ್ರವೇಶ ದ್ವಾರ ಸಿಕ್ಕಿತು. ಆದರೆ ಎಲ್ಲ ಬಾಗಿಲುಗಳಿಗೂ ಬೀಗ ಹಾಕಲಾಗಿತ್ತು. ಹನುಮನಗುಂಡಿಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಯಿತೆಂದು ಅರಣ್ಯ ಇಲಾಖೆ ಜಲಪಾತಕ್ಕೆ ಪ್ರವೇಶ ನಿರ್ಬಂಧಿಸಿದ ವಿವಾದ ನೆನಪಾಯಿತು!

ಎಸ್.ಕೆ.ಬಾರ್ಡರ್‌ಗಿಂತ ಎರಡು ಕಿ.ಮೀ. ಮೊದಲೇ ಸಿಗುವ ಅತ್ಯಂತ ಎತ್ತರದ ಬೆಟ್ಟವೊಂದರ ಮೇಲೆ ನಾವು ಪ್ರಯಾಣ ನಿಲ್ಲಿಸಿದೆವು. ಅಲ್ಲಿಂದ ಕಾಣುವ ನೂರಾರು ಎಕರೆಗಳ ಹಚ್ಚ ಹಸಿರಿನ ಶೋಲಾ ಅರಣ್ಯಗಳನ್ನು ಎಷ್ಟು ಕಣ್ತುಂಬಿಕೊಂಡರೂ ಸಾಕಾಗಲಿಲ್ಲ.

ಮುಗಿಲು ಮುಚ್ಚಿದ್ದ ಆ ಕಣಿವೆಯ ಆಳ ತಿಳಿಯಬೇಕಾದರೆ ಮುಗಿಲು ಗಾಳಿಯಿಂದ ಸರಿಯಬೇಕಾಗುತ್ತಿತ್ತು. ಮತ್ತೆ ಕೆಲ ಹೊತ್ತಿನಲ್ಲೇ ಮುಗಿಲು ಛಲ ಬಿಡದೆ ಕಣಿವೆಯನ್ನು ಆವರಿಸುತ್ತಿತ್ತು.

ಅರ್ಧ ಗಂಟೆ ಅಲ್ಲಿನ ಮೋಡ, ಮುಗಿಲು, ಚಳಿಗಾಳಿ, ಜಡಿಮಳೆಯ ವಿಭಿನ್ನ ಅನುಭೂತಿಗಳನ್ನು ಅನುಭವಿಸಿದ ಮೇಲೆ ನಾವು ಕಳಸಕ್ಕೆ ಹೊರಟೆವು. ಕುದುರೆಮುಖದ ಕಡೆಗೆ ಮರಳುವಾಗ ಅಲ್ಲಿನ ಪಾಳು ಬಿದ್ದ ಸಾವಿರಾರು ಮನೆ, ಆಸ್ಪತ್ರೆ, ಶಾಲೆ, ಮಾರುಕಟ್ಟೆ ಕಂಡು ಕೋಟಿಗಟ್ಟಲೆ ಹಣ ಪೋಲಾಗುತ್ತಿದೆಯಲ್ಲ ಎನ್ನಿಸಿತು.

'ಊಟಿ, ಕೊಡೈಕೆನಾಲ್‌ನಲ್ಲಿ ಮೂರು ತಿಂಗಳ ಪ್ರವಾಸೋದ್ಯಮದಿಂದ ವರ್ಷಕ್ಕೆ ಸಾಕಾಗುವಷ್ಟು ದುಡೀತಾರೆ. ಕುದುರೆಮುಖದಲ್ಲಿ ಇಡೀ ವರ್ಷ ಪ್ರವಾಸಿಗರನ್ನು ಸೆಳೆದರೆ ಎಷ್ಟು ವರಮಾನ ಬರಬಹುದು' ಎಂಬ ಕುದುರೆಮುಖದ ನಿವಾಸಿ ಒಬ್ಬರ ಮಾತು ನೆನಪಿಗೆ ಬಂತು. ಜೊತೆಗೆ ಕುದುರೆಮುಖದ ಬಗ್ಗೆ ಸರ್ಕಾರದ ನಿರ್ಲಕ್ಷ್ಯ ಕೂಡ ಜಿಗುಪ್ಸೆ ತಂದಿತು.